# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಬೆಳಗಾವಿ–591156

# ಸಿಂಡಿಕೇಟ್ ಸಭೆಯ ನಡಾವಳಿಗಳು.

ದಿನಾಂಕ : ಶುಕ್ರವಾರ 01–06–2019

ಸಮಯ : ಮಧ್ಯಾಹ್ನ 2 : 00 ಘಂಟೆ

ಸ್ಥಳ : ಸಿಂಡಿಕೇಟ್ ಸಭಾಂಗಣ,
ರಾ.ಚ.ವಿ.ವಿ. ಬೆಳಗಾವಿ

## ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಾಮಾನ್ಯ ಸಿಂಡಿಕೇಟ್ ಸಭೆಯ ದಿನಾಂಕ **01 ಜೂನ್ 2019** ರಂದು **ಮಧ್ಯಾಹ್ನ 02.00** ಘಂಟೆಗೆ ನಡೆದ ಸಭೆಗೆ ಹಾಜರಿದ್ದ/ಹಾಜರಿರದ ಸದಸ್ಯರುಗಳ ವಿವರ.

### I. ಹಾಜರಿದ್ದ ಸದಸ್ಯರು

| | | |
|---|---|---|
| 1. | **ಪ್ರೊ. ಶಿವಾನಂದ ಬಿ. ಹೊಸಮನಿ** | **ಕುಲಪತಿಗಳು ಹಾಗೂ ಅಧ್ಯಕ್ಷರು** |
| 2. | ಶ್ರೀ ನರಸಿಂಹ ರಾಯಚೂರ | ಸದಸ್ಯರು |
| 3. | ಡಾ. ಎಚ್. ಐ. ತಿಮ್ಮಾಪೂರ | ಸದಸ್ಯರು |
| 4. | ಡಾ. ಎಸ್. ಎಂ ಜೋಶಿ | ಸದಸ್ಯರು |
| 5. | ಡಾ.(ಶ್ರೀಮತಿ) ಎಸ್.ಐ. ಮಡಿವಾಳಪ್ಪಾಗೋಳ | ಸದಸ್ಯರು |
| 6. | ಪ್ರೊ. ಡಿ.ಎನ್. ಪಾಟೀಲ | ಸದಸ್ಯರು |
| 7. | **ಪ್ರೊ. ರಂಗರಾಜ ವನದುರ್ಗ** | **ಕುಲಸಚಿವರು(ಮೌ) ಹಾಗೂ ಸದಸ್ಯರು** |
| 8. | **ಪ್ರೊ. ಸಿದ್ದು. ಪಿ. ಆಲಗೂರ** | **ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು** |

### II. ಹಾಜರಾಗದ ಸದಸ್ಯರು:

| | | |
|---|---|---|
| 1. | ಶ್ರೀ ಬಸವರಾಜ ಎನ್. ಚಿಕ್ಕನಗೌಡರ | ಸದಸ್ಯರು |
| 2. | ಡಾ. ಎ.ಡಿ. ಟೊನಗೆ | ಸದಸ್ಯರು |
| 3. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ | ಸದಸ್ಯರು |
| 4. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ | ಸದಸ್ಯರು |
| 5. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ | ಸದಸ್ಯರು |
| 6. | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ | ಸದಸ್ಯರ |
| 7. | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ | ಸದಸ್ಯರು |

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಬೆಂಗಳೂರು–ಪೂನಾ ರಾ.ಹೆ.–4, ಬೆಳಗಾವಿ–591156

## ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡುವಳಿಗಳು

**ವಿಷಯ:** ದಿನಾಂಕ 01 ಜೂನ್ 2019 ರಂದು ಜರುಗಿದ ವಿಶ್ವವಿದ್ಯಾಲಯದ ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡಾವಳಿಗಳು.

**ಉಲ್ಲೇಖ:**
1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (27)(28)(2)
2. ಮಾನ್ಯ ಕುಲಪತಿಗಳು ಸಭೆ ನಡೆಸಲು ನೀಡಿದ ಅನುಮೋದನೆ ದಿ: 25–05–2019
3. ಸಿಂಡಿಕೇಟ್ ಪ್ರಾಧಿಕಾರ ಸಭೆ ನೋಟಿಸ್ ದಿನಾಂಕ: 25–05–2019

**ಪ್ರಸ್ತಾವನೆ**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ(27)(28)(2)ರ ಅನುಗುಣವಾಗಿ ಸಿಂಡಿಕೇಟ್ ಪ್ರಾಧಿಕಾರ ಸಭೆ ಆಯೋಜನೆ ಮಾಡಿ ಮಾನ್ಯ ಕುಲಪತಿಗಳು ಹಾಗೂ ಪ್ರಾಧಿಕಾರದ ಸಭಾಧ್ಯಕ್ಷರಾದ ಪ್ರೊ. ಶಿವಾನಂದ ಬಿ. ಹೊಸಮನಿ ಇವರು ಸಭೆಗೆ ಆಗಮಿಸಿದ ಎಲ್ಲ ಸದಸ್ಯರುಗಳನ್ನು ಸ್ವಾಗತಿಸಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಗೆ ಹೊಸದಾಗಿ ನಾಮನಿರ್ದೇಶನಗೊಂಡ ಪ್ರೊ. ಡಿ.ಎನ್. ಪಾಟೀಲರನ್ನು ಮಾನ್ಯ ಕುಲಪತಿಗಳು ಹೂ ಗುಚ್ಚ ನೀಡುವುದರ ಮೂಲಕ ಸ್ವಾಗತಿಸಿ ಸಭೆಗೆ ಪರಿಚಯಿಸಿದರು ಮತ್ತು ನಿರ್ಗಮಿತ ಸದಸ್ಯರಾದಂತಹ ಡಾ.(ಶ್ರೀಮತಿ) ಪೂರ್ಣಿಮಾ ಪಟ್ಟಣಶೆಟ್ಟಿ ಇವರಿಗೆ ವಿಶ್ವವಿದ್ಯಾಲಯದ ಪರವಾಗಿ ಕೃತಜ್ಞತೆ ಸಲ್ಲಿಸಿದರು.

ಕುಲಸಚಿವರು ಮತ್ತೊಮ್ಮೆ ಸಭೆಯನ್ನು ಸ್ವಾಗತಿಸಿ ವಿಷಯ ಸೂಚಿಗಳನ್ನು ಪ್ರಸ್ತಾಪಿಸಿದರು.

**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಿಂಡಿಕೇಟ್ ಪ್ರಾಧಿಕಾರ ಸಭೆ ಕಾರ್ಯಸೂಚಿ ಅನುಗುಣವಾಗಿ ದಿನಾಂಕ 01–06–2019 ರಂದು ಕೈಗೊಂಡ ತೀರ್ಮಾನಗಳು.**

| ಕ್ರ.ಸಂ | ಸಂಖ್ಯೆ | ಕಾರ್ಯಸೂಚಿ ವಿವರ ಹಾಗೂ ಕೈಗೊಂಡ ತೀರ್ಮಾನಗಳು |
|---|---|---|
| 1 | 2019/06/01 | ಹಿಂದಿನ ಸಭೆಯ ಗೊತ್ತುವಳಿಗಳನ್ನು ಹಾಗೂ ಅನುಪಾಲನಾ ವರದಿಗಳನ್ನು ದೃಢೀಕರಣಕ್ಕಾಗಿ ಸಭೆಯ ಮುಂದಿಡುವುದು. |
| | ತೀರ್ಮಾನ | **ದಿನಾಂಕ 01–03–2019 ರಂದು ನಡೆದ ಸಾಮಾನ್ಯ ಸಿಂಡಿಕೇಟ್ ಸಭೆಯ ಗೊತ್ತುವಳಿಗಳ ಅನುಪಾಲನಾ ವರದಿಯನ್ನು ಸಿಂಡಿಕೇಟ್ ಸಭೆಯು ದೃಢೀಕರಿಸಿತು.** |
| 2 | 2019/06/02 | ಬೋಧಕೇತರ ಸಿಬ್ಬಂದಿಗಳ ಕೋರಿಕೆ ಮೇರೆಗೆ ವಿವಿಧ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ವಿಶ್ವವಿದ್ಯಾಲಯದಿಂದ ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಿರುವ ಬಗ್ಗೆ ಅನುಸಮರ್ಥನೆ ನೀಡುವ ಕುರಿತು. |
| | ತೀರ್ಮಾನ | **ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು.** |
| 3 | 2019/06/03 | ಪ್ರೊ. ಟಿ. ವೆಂಕಟೇಶ, ಪ್ರಾಧ್ಯಾಪಕರು ಗಣಿತಶಾಸ್ತ್ರ ವಿಭಾಗ, ಇವರಿಗೆ ನಿವೃತ್ತಿ ಪಿಂಚಣಿ ಮಂಜೂರು ಮಾಡುವ ಕುರಿತು. |
| | ತೀರ್ಮಾನ | **ಪ್ರೊ. ಟಿ. ವೆಂಕಟೇಶ, ಪ್ರಾಧ್ಯಾಪಕರು ಗಣಿತಶಾಸ್ತ್ರ ವಿಭಾಗ, ಇವರಿಗೆ ನಿವೃತ್ತಿ ಪಿಂಚಣಿ ಮಂಜೂರು ಮಾಡಲು ಸಭೆಯು ಅನುಮತಿ ನೀಡಿತು.** |

| | | |
|---|---|---|
| 4 | 2019/06/04 | ವಿಶ್ವವಿದ್ಯಾಲಯದ ಇಬ್ಬರ ಬೋಧಕ ಸಿಬ್ಬಂದಿಗಳಿಗೆ ಎಂ.ಫಿಲ್/ ಪಿಎಚ್.ಡಿ. ಪದವಿಗಾಗಿ ವೇತನ ಮುಂಬಡ್ತಿ ನೀಡಿರುವ ಬಗ್ಗೆ ಅನುಸಮರ್ಥನೆ ನೀಡುವ ಕುರಿತು. |
| | ತೀರ್ಮಾನ | **ವಿಶ್ವವಿದ್ಯಾಲಯದ ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಶೋಭಾ ನಾಯಕ ಇವರಿಗೆ ಎಂ.ಫಿಲ್ ಪದವಿಗೆ ಹಾಗೂ ಡಾ. ಮೈತ್ರೇಯಿಣಿ ಗದಿಗೆಪ್ಪಗೌಡರ ಇವರಿಗೆ ಪಿಎಚ್.ಡಿ. ಪದವಿಗಾಗಿ ವೇತನ ಮುಂಬಡ್ತಿಯನ್ನು ನೀಡಿದಕ್ಕಾಗಿ ಸಭೆಯು ಅನುಸಮರ್ಥಿಸಿತು.** |
| 5 | 2019/06/05 | ಶ್ರೀ ಶಂಕರಾನಂದ ಬನಶಂಕರಿ, ಹಣಕಾಸು ಅಧಿಕಾರಿಗಳು ಇವರ ತಾಯಿಯ ವೈದ್ಯಕೀಯ ವೆಚ್ಚ ಮರುಸಂದಾಯ ಮಾಡುವ ಕುರಿತು. |
| | ತೀರ್ಮಾನ | **ಶ್ರೀ ಶಂಕರಾನಂದ ಬನಶಂಕರಿ, ಹಣಕಾಸು ಅಧಿಕಾರಿಗಳು ಇವರ ತಾಯಿಯ ವೈದ್ಯಕೀಯ ವೆಚ್ಚ ರೂ.1,06,164.02(ಒಂದು ಲಕ್ಷ ಆರು ಸಾವಿರದಾ ಒಂದು ನೂರಾ ಅರವತ್ನಾಲ್ಕು ರೂಪಾಯಿ ಎರಡು ಪೈಸೆ)ಗಳನ್ನು ಮರುಸಂದಾಯ ಮಾಡಲು ಸಭೆಯು ಅನುಮೋದನೆ ನೀಡಿತು.** |
| 6 | 2019/06/06 | ಡಾ. ಎಂ.ಬಿ. ಶ್ರೀಧರ, ಸಹಾಯಕ ಪ್ರಾಧ್ಯಾಪಕರು ಇವರ ವೈದ್ಯಕೀಯ ವೆಚ್ಚ ಮರುಸಂದಾಯ ಮಾಡುವ ಕುರಿತು. |
| | ತೀರ್ಮಾನ | **ಡಾ. ಎಂ.ಬಿ. ಶ್ರೀಧರ, ಸಹಾಯಕ ಪ್ರಾಧ್ಯಾಪಕರು ಇವರ ವೈದ್ಯಕೀಯ ವೆಚ್ಚ ರೂ.58,056.92(ಐವತ್ತೆಂಟು ಸಾವಿರದಾ ಐವತ್ತಾರು ರೂಪಾಯಿ ತೊಂಬತ್ತೆರಡು ಪೈಸೆ)ಗಳನ್ನು ಮರುಸಂದಾಯ ಮಾಡಲು ಸಭೆಯು ಅನುಮೋದನೆ ನೀಡಿತು.** |
| 7 | 2019/06/07 | ವಿಶ್ವವಿದ್ಯಾಲಯದ ಸೇವೆಯಲ್ಲಿರುವ ಬೋಧಕ ಸಿಬ್ಬಂದಿಗಳು ಕುಲಪತಿಗಳ ಹುದ್ದೆಗೆ ಅರ್ಜಿ ಸಲ್ಲಿಸಿದ ಮನವಿ ಬಗ್ಗೆ. |
| | ತೀರ್ಮಾನ | **ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕ ಸಿಬ್ಬಂದಿಗಳು ಕುಲಪತಿಗಳ ಹುದ್ದೆಗೆ ಅರ್ಜಿಗಳನ್ನು ಸಲ್ಲಿಸಿದ್ದಕ್ಕೆ ಸಭೆಯು ಅನುಸಮರ್ಥನೆ ನೀಡಿತು.** |
| 8 | 2019/06/08 | ಸ್ನಾತಕೋತ್ತರ ಕೇಂದ್ರ ವಿಜಯಪುರದಲ್ಲಿ ಉಪಯೋಗಿಸದೆ ಇರುವ Food Processing Unit ಬಗ್ಗೆ ಕೈಕೊಳ್ಳಬಹುದಾದ ಕ್ರಮದ ಬಗ್ಗೆ ಸಮಿತಿಯು ನೀಡಿರುವ ವರದಿಯನ್ನು ಸಭೆಯ ಮುಂದೆ ಮಂಡಿಸುವ ಕುರಿತು. |
| | ತೀರ್ಮಾನ | **ಸ್ನಾತಕೋತ್ತರ ಕೇಂದ್ರ ವಿಜಯಪುರದಲ್ಲಿ ಉಪಯೋಗಿಸದೆ ಇರುವ Food Processing Unit£ ಕುರಿತಂತೆ ಸಮಿತಿಯು ನೀಡಿರುವ ವರದಿಯನ್ವಯ ಕ್ರಮಕೈಕೊಳ್ಳಲು ಸಭೆಯ ಅನುಮೋದನೆ ನೀಡಿತು.** |
| 9 | 2019/06/09 | ಸ್ನಾತಕೋತ್ತರ ಕೇಂದ್ರ ವಿಜಯಪುರದಲ್ಲಿ ಡಾ. ಫ.ಗು. ಹಳಕಟ್ಟಿ ಇವರ ಮೂರ್ತಿ ಪ್ರತಿಷ್ಠಾಪನೆಗೆ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಸಮಿತಿಯು ನೀಡಿರುವ ವರದಿಯನ್ನು ಸಭೆಯ ಮುಂದೆ ಮಂಡಿಸುವ ಕುರಿತು. |
| | ತೀರ್ಮಾನ | **ಸ್ನಾತಕೋತ್ತರ ಕೇಂದ್ರ ವಿಜಯಪುರದಲ್ಲಿ ಡಾ. ಫ.ಗು. ಹಳಕಟ್ಟಿ ಇವರ ಮೂರ್ತಿ ಪ್ರತಿಷ್ಠಾಪನೆಗೆ ಸಂಬಂಧಿಸಿದಂತೆ, ಸಮಿತಿಯು ನೀಡಿರುವ ವರದಿಯನ್ವಯ ಕ್ರಮಕೈಕೊಳ್ಳಲು ಸಭೆಯ ಅನುಮೋದನೆ ನೀಡಿತು.** |
| 10 | 2019/06/10 | ಸಂಗೊಳ್ಳಿ ರಾಯಣ್ಣ ಘಟಕ ಮಹಾವಿದ್ಯಾಲಯದಲ್ಲಿ ಸ್ನಾತಕ ವಿಷಯಗಳ ಬೋಧನೆಗೆ ಅತಿಥಿ ಉಪನ್ಯಾಸಕರ ನೇಮಕಾತಿ ಪ್ರಕ್ರಿಯೆಗೆ ಅನುಸಮರ್ಥನೆ ನೀಡುವ ಕುರಿತು. |
| | ತೀರ್ಮಾನ | **ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು.** |

| | | |
|---|---|---|
| 11 | 2019/06/11 | ಹಣಕಾಸು ವಿಭಾಗದ ಕಿರಿಯ ಸಹಾಯಕರಾದ ಶ್ರೀ ರಾಜೇಂದ್ರ ಸನದಿ ಇವರಿಗೆ ಕಛೇರಿ ಕೆಲಸಕ್ಕಾಗಿ ಸ್ಥಳೀಯ ಪ್ರಯಾಣ ಭತ್ಯೆ ಮರು ಅನುಮೋದನೆ ನೀಡುವ ಕುರಿತು. |
| | ತೀರ್ಮಾನ | **ಹಣಕಾಸು ವಿಭಾಗದ ಕಿರಿಯ ಸಹಾಯಕರಾದ ಶ್ರೀ ರಾಜೇಂದ್ರ ಸನದಿ ಇವರಿಗೆ ಲೆಕ್ಕ ಪರಿಶೋಧನೆ ಆಕ್ಷೇಪಣೆಯ ಷರತ್ತಿಗೆ ಒಳಪಟ್ಟು, ವಿಶ್ವವಿದ್ಯಾಲಯದ ಕಛೇರಿ ಕೆಲಸಕ್ಕಾಗಿ ಸ್ಥಳೀಯ ಪ್ರಯಾಣ ಭತ್ಯೆ ರೂ.1,500/-ಗಳನ್ನು ನೀಡಲು ಸಭೆಯು ಅನುಮೋದನೆ ನೀಡಿತು.** |
| 12 | 2019/06/12 | NAD ಗೆ ಸಂಬಂಧಿಸಿದ ಸ್ನಾತಕ ಹಾಗೂ ಸ್ನಾತಕೋತ್ತರ ಅಂಕಪಟ್ಟಿಗೆ ಡಿಜಿಟಲ್ ಕೀ ಪಡೆಯಲು ಅನುಮೋದನೆ ನೀಡುವ ಕುರಿತು. |
| | ತೀರ್ಮಾನ | **NAD ಗೆ ಸಂಬಂಧಿಸಿದ ಸ್ನಾತಕ ಹಾಗೂ ಸ್ನಾತಕೋತ್ತರ ಅಂಕಪಟ್ಟಿಗೆ ಡಿಜಿಟಲ್ ಕೀ ಪಡೆಯಲು ಸಭೆಯು ಅನುಮೋದನೆ ನೀಡಿತು.** |
| 13 | 2019/06/13 | ಪಂಡಿತ ದೀನದಯಾಳ ಉಪಾಧ್ಯಾಯ ಅಧ್ಯಯನ ಪೀಠದ ಸಂಯೋಜಕರು ಇವರು ಪೀಠದ ಕೆಲಸ ಕಾರ್ಯಗಳಿಗೆ ವಿಮಾನದ ಮೂಲಕ ತೆರಳಿದಕ್ಕೆ ಅನುಸಮರ್ಥನೆ ನೀಡುವ ಕುರಿತು. |
| | ತೀರ್ಮಾನ | **ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು.** |
| 14 | 2019/06/14 | Audit adhoc ಸಮಿತಿ ಸಭೆ ಆಯೋಜನೆಗೆ ಅನುಮತಿ ನೀಡುವ ಕುರಿತು. |
| | ತೀರ್ಮಾನ | **Audit adhoc ಸಮಿತಿ ಸಭೆಯನ್ನು ಆಯೋಜಿಸಲು ಸಭೆಯು ಅನುಮೋದನೆ ನೀಡಿತು ಹಾಗೂ 2016-17 ಮತ್ತು 2017-18ನೇ ಸಾಲಿನ ಲೆಕ್ಕ ಪರಿಶೋಧನೆ ಆಕ್ಷೇಪಣೆಯ ಅನುಪಾಲನಾ ವರದಿಯನ್ನು Audit adhoc ಸಮಿತಿ ಸಭೆಯಲ್ಲಿ ಮಂಡಿಸಲು ಸೂಚಿಸಿತು.** |
| 15 | 2019/06/15 | ಶ್ರೀ ಶಿವಣ್ಣಾ ವಾಲಿ ಮೆಮೋರಿಯಲ್ ಶಿಕ್ಷಣ ಸಂಸ್ಥೆಯ ಕೋನಿಕಾ ಬಿ.ಬಿ.ಎ. ಮತ್ತು ಬಿ.ಸಿ.ಎ. ಮಹಾವಿದ್ಯಾಲಯವನ್ನು ಸ್ಥಳಾಂತರ ಮಾಡಲು ಸ್ಥಳೀಯ ತನಿಖಾ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದನೆ ನೀಡುವ ಕುರಿತು. |
| | ತೀರ್ಮಾನ | **ಸ್ಥಳೀಯ ತನಿಖಾ ಸಮಿತಿಯ ಶಿಫಾರಸ್ಸಿನಂತೆ, ಶ್ರೀ ಶಿವಣ್ಣಾ ವಾಲಿ ಮೆಮೋರಿಯಲ್ ಶಿಕ್ಷಣ ಸಂಸ್ಥೆಯ ಕೋನಿಕಾ ಬಿ.ಬಿ.ಎ. ಮತ್ತು ಬಿ.ಸಿ.ಎ. ಮಹಾವಿದ್ಯಾಲಯವನ್ನು ಹೊಸ ಕಟ್ಟಡದ ವಿಳಾಸ 'ಶ್ರೀ ಶಿವಣ್ಣಾ ವಾಲಿ ಮೆಮೋರಿಯಲ್ ಶಿಕ್ಷಣ ಸಂಸ್ಥೆಯ ಕೋನಿಕಾ ಬಿ.ಬಿ.ಎ. ಮತ್ತು ಬಿ.ಸಿ.ಎ. ಮಹಾವಿದ್ಯಾಲಯ ಸಿಂದಗಿ ನಾಕಾ, ಕಾರ್ಮಿಕ ಸಚಿವಾಲಯ, ರಂಭಾಪುರ ರೋಡ, ವಿಜಯಪುರ-586101' ಇಲ್ಲಿಗೆ ಸ್ಥಳಾಂತರ ಮಾಡಲು ಸಭೆಯು ಅನುಮೋದನೆ ನೀಡಿತು.** |
| 16 | 2019/06/16 | 2019-20ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆ ಮುಂದುವರಿಕೆಗಾಗಿ ಅರ್ಜಿ ಸಲ್ಲಿಸಿರುವಂತಹ ಮಹಾವಿದ್ಯಾಲಯಗಳಿಗೆ ಸ್ಥಳೀಯ ತನಿಖಾ ಸಮಿತಿಯವರು ಪರಿಶೀಲನೆ/ ಮರು ಪರಿಶೀಲನೆ ಮಾಡಿ ಶಿಫಾರಸ್ಸು ಮಾಡಿ ನೀಡಿರುವ ವರದಿಗಳನ್ನು ಸಭೆಯ ಪರಿಶೀಲನೆಗಾಗಿ ಮಂಡಿಸುವ ಕುರಿತು. |
| | ತೀರ್ಮಾನ | **2019-20ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆ ಮುಂದುವರಿಕೆಗಾಗಿ ಅರ್ಜಿ ಸಲ್ಲಿಸಿರುವಂತಹ ಮಹಾವಿದ್ಯಾಲಯಗಳಿಗೆ ಸ್ಥಳೀಯ ತನಿಖಾ ಸಮಿತಿಯವರು ಪರಿಶೀಲನೆ/ ಮರು ಪರಿಶೀಲನೆ ಮಾಡಿ ಶಿಫಾರಸ್ಸು ಮಾಡಿ ನೀಡಿರುವ ವರದಿಗಳನ್ನು ಸಭೆಯು ಪರಿಶೀಲಿಸಿ, ಅನುಮೋದನೆ ನೀಡಿತು.** |

| | | |
|---|---|---|
| 17 | 2019/06/17 | ವಿಜಯಪುರದ ಜಿಲ್ಲೆಯ ಶ್ರೀ ಕಾಗಿನೆಲೆ ಮಹಾಸಂಸ್ಥಾನದ ಕನಕ ಗುರುಪೀಠ, ಗುಲ್ಬರ್ಗಾ ಇವರು ಮಹಾವಿದ್ಯಾಲಯದ ಹೆಸರು ಬದಲಾವಣೆಗೆ ವಿನಂತಿಸಿಕೊಂಡಿರುವ ಕುರಿತು. |
| | ತೀರ್ಮಾನ | **ಶ್ರೀ ಕಾಗಿನೆಲೆ ಮಹಾಸಂಸ್ಥಾನದ ಕನಕ ಗುರುಪೀಠ, ಗುಲ್ಬರ್ಗಾ ಇವರ ಆಡಳಿತ ಮಂಡಳಿಯ ಮನವಿಯಂತೆ, ಸದರಿ ಮಹಾವಿದ್ಯಾಲಯದ ಹೆಸರನ್ನು 'ಶ್ರೀ ಕಾಗಿನೆಲೆ ಮಹಾಸಂಸ್ಥಾನದ ಕನಕ ಗುರುಪೀಠ, ಗುಲ್ಬರ್ಗಾ ವಿಭಾಗ, ಶ್ರೀ ರೇವಣಸಿದ್ದೇಶ್ವರ ಸ್ಮಾರಕ ಶ್ರೀ ಸಿದ್ದಪ್ಪ ಬಸಪ್ಪ ಹುಲ್ಲೂರು ವಾಣಿಜ್ಯ ಪದವಿ ಮಹಾವಿದ್ಯಾಲಯ ಪೊ: ಮುದ್ದೇಬಿಹಾಳ –586212, ವಿಜಯಪುರ' ಎಂದು ಬದಲಾವಣೆ ಮಾಡಲು ಸಭೆಯು ಅನುಮೋದನೆ ನೀಡಿತು.** |
| 18 | 2019/06/18 | ವಿಜಯಪುರದ ಜಿಲ್ಲೆಯ ಶಿಕ್ಷಣ ಪ್ರಸಾರಕ ಮಂಡಳಿಯ ಚನ್ನವೀರಪ್ಪ ಮಲ್ಲಪ್ಪ ಮನಗೂಳಿ ಮಹಾವಿದ್ಯಾಲಯದ ಹೆಸರು ಬದಲಾವಣೆಗೆ ವಿನಂತಿಸಿಕೊಂಡಿರುವ ಕುರಿತು. |
| | ತೀರ್ಮಾನ | **ಶಿಕ್ಷಣ ಪ್ರಸಾರಕ ಮಂಡಳಿಯ ಚನ್ನವೀರಪ್ಪ ಮಲ್ಲಪ್ಪ ಮನಗೂಳಿ ಮಹಾವಿದ್ಯಾಲಯ ಆಡಳಿತ ಮಂಡಳಿಯ ಮನವಿಯಂತೆ, ಸದರಿ ಮಹಾವಿದ್ಯಾಲಯದ ಹೆಸರನ್ನು 'ತಾಲೂಕ ಶಿಕ್ಷಣ ಮಂಡಳಿಯ ಚನವೀರಪ್ಪ ಮಲ್ಲಪ್ಪ ಮನಗೂಳಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ ಪೊ. ಸಿಂಧಗಿ–586128 ಜಿ. ವಿಜಯಪುರ' ಎಂದು ಬದಲಾವಣೆ ಮಾಡಲು ಸಭೆಯು ಅನುಮೋದನೆ ನೀಡಿತು.** |
| 19 | 2019/06/19 | ಬಿ.ಎಲ್.ಡಿ.ಇ. ಸಂಸ್ಥೆಯ ಎಸ್.ಬಿ. ಕಲಾ ಮತ್ತು ಕೆ.ಸಿ.ಪಿ. ವಿಜ್ಞಾನ ಮಹಾವಿದ್ಯಾಲಯ ಮತ್ತು ಬಾಗಲಕೋಟೆಯ ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯ ಇಲ್ಲಿಯ ಸ್ನಾತಕೋತ್ತರ ರಸಾಯನಶಾಸ್ತ್ರ ವಿಷಯಕ್ಕೆ ಸಂಶೋಧನಾ ಕೇಂದ್ರದ ಮಾನ್ಯತೆ ನೀಡುವುದಕ್ಕೆ ಸಂಬಂಧಿಸಿದಂತೆ ತನಿಖಾ ಸಮಿತಿಯವರು ಪರಿಶೀಲನೆ ಮಾಡಿ ನೀಡಿರುವ ವರದಿಗಳನ್ನು ಸಭೆಯ ಪರಿಶೀಲನೆಗಾಗಿ ಮಂಡಿಸಿರುವ ಕುರಿತು. |
| | ತೀರ್ಮಾನ | **ಬಿ.ಎಲ್.ಡಿ.ಇ. ಸಂಸ್ಥೆಯ ಎಸ್.ಬಿ. ಕಲಾ ಮತ್ತು ಕೆ.ಸಿ.ಪಿ. ವಿಜ್ಞಾನ ಮಹಾವಿದ್ಯಾಲಯ ಮತ್ತು ಬಾಗಲಕೋಟೆಯ ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯ ಇಲ್ಲಿಯ ಸ್ನಾತಕೋತ್ತರ ರಸಾಯನಶಾಸ್ತ್ರ ವಿಷಯಕ್ಕೆ ಸಂಶೋಧನಾ ಕೇಂದ್ರದ ಮಾನ್ಯತೆ ನೀಡುವುದಕ್ಕೆ ಸಂಬಂಧಿಸಿದಂತೆ ತನಿಖಾ ಸಮಿತಿಯವರು ಪರಿಶೀಲನೆ ಮಾಡಿ ನೀಡಿರುವ ವರದಿಗಳನ್ನು ಸಭೆಯ ಪರಿಶೀಲಿಸಿ, ಅನುಮೋದನೆ ನೀಡಿತು.** |
| 20 | 2019/06/20 | 2019–20ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಅನುಸಮರ್ಥನೆ ನೀಡುವ ಕುರಿತು. |
| | ತೀರ್ಮಾನ | **ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು.** |
| 21 | 2019/06/21 | ಪ್ರೊ.(ಶ್ರೀಮತಿ) ಎಚ್.ಎಂ. ಶೈಲಜಾ ನಿವೃತ್ತ ಪ್ರಾಧ್ಯಾಪಕರು ಇವರಿಗೆ ಪಿಂಚಣಿ ಸೌಲಭ್ಯ ಮಂಜೂರಾತಿ ಬಗ್ಗೆ. |
| | ತೀರ್ಮಾನ | **ಪ್ರೊ.(ಶ್ರೀಮತಿ) ಎಚ್.ಎಂ. ಶೈಲಜಾ, ಇವರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ದಿನಾಂಕ: 31–03–2017 ಕ್ಕೆ ವಯೋನಿವೃತ್ತಿ ಹೊಂದಿದ್ದು ಕೆ.ಸಿ.ಎಸ್.ಆರ್ ನಿಯಮಾವಳಿ ನಿಯಮ 95ರಂತೆ ಘಟನೋತ್ತರ ಮಂಜೂರಾತಿಯನ್ನು ನೀಡಿತು. ಈ ಹಿಂದಿನ ಕರ್ನಾಟಕ ವಿಶ್ವವಿದ್ಯಾಲಯದಲ್ಲಿನ ಸೇವೆಯನ್ನು ಪಿಂಚಣಿ ಉದ್ದೇಶಕ್ಕಾಗಿ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಲು ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಇವರಿಗೆ ವಿನಂತಿಯನ್ನು ಕಳುಹಿಸುವಂತೆ ಸದರಿಯವರು ಕೋರಿದ್ದ ಹಿನ್ನೆಲೆಯಲ್ಲಿ ಈ ಕಛೇರಿ ಪತ್ರ ಸಂಖ್ಯೆ: 2014–15/783 ದಿನಾಂಕ: 30–05–2014 ರಂತೆ ಮನವಿಯನ್ನು ಕಳುಹಿಸಿಕೊಡಲಾಗಿತ್ತು. ಅದಕ್ಕೆ** |

| | | |
|---|---|---|
| | | ಪ್ರತಿಯಾಗಿ ಸದರಿಯವರ ಈ ಹಿಂದಿನ ಸೇವೆಯನ್ನು ಪಿಂಚಣಿ ಉದ್ದೇಶಗಳಿಗೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲವೆಂದು ಸರ್ಕಾರದಿಂದ ಪತ್ರ ಬಂದಿರುತ್ತದೆ (ಪತ್ರ ಸಂಖ್ಯೆ: ಇಡಿ 317 ಯುಆರ್‌ಸಿ 2014 ದಿನಾಂಕ: 22-12-2014 & ED(Spl) 2019 PEN 2012 ದಿನಾಂಕ: 21-02-2015).<br>ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಇವರಿಗೆ ಸದರಿಯವರ ಪಿಂಚಣಿ ಅಂಶದಾನ ಮತ್ತು ರಜಾ ವೇತನ ಅಂಶದಾನದ ಮೊತ್ತವನ್ನು ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸುವಂತೆ ಪತ್ರ ಸಂಖ್ಯೆ: 2013-14/7384, ದಿನಾಂಕ: 25-03-2014 ಹಾಗೂ ಪತ್ರ ಸಂಖ್ಯೆ: 2016-17/617, ದಿನಾಂಕ: 07-02-2017ರ ಮೂಲಕ ಕೋರಲಾಗಿತ್ತು. ಅದಕ್ಕೆ ಪ್ರತಿಯಾಗಿ ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಪತ್ರ ಸಂಖ್ಯೆ: 2017/5926, ದಿನಾಂಕ: 02-03-2017 ರಂತೆ ಸರ್ಕಾರದ ಅಧೀನ ಕಾರ್ಯದರ್ಶಿಗಳ ಪತ್ರ ಸಂಖ್ಯೆ: ಇಡಿ 165/ಯುಕೆವಿ 2016 ದಿನಾಂಕ: 31-01-2017ರಂತೆ ಸರ್ಕಾರದ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಎಫ್.ಡಿ(Spl) 01 PEN 2007, ದಿನಾಂಕ: 17-07-2007ರಂತೆ ಸ್ವಾಯತ್ತ ಸಂಸ್ಥೆಗಳು, ವಿಶ್ವವಿದ್ಯಾಲಯಗಳಿಗೆ ಹಳೆಯ ಪಿಂಚಣಿ ಯೋಜನೆ ನಿಯಮಗಳು ಅನ್ವಯಿಸದೇ ಇರುವ ಬಗ್ಗೆ ಉಲ್ಲೇಖಿಸುತ್ತ ದಿನಾಂಕ: 01-04-2006ರ ನಂತರ ಸರ್ಕಾರಿ ಸೇವೆಗೆ ನೇಮಕಗೊಳ್ಳುವ ನೌಕರರಿಗೆ ಸೇವೆಗೆ ಸೇರಿದ ದಿನಾಂಕವನ್ನು ಮಾನದಂಡವಾಗಿ ಪರಿಗಣಿಸಲಾಗುತ್ತದೆ ಎಂದು ತಿಳಿಸುತ್ತಾ, ಇದರ ಬಗ್ಗೆ ಸರ್ಕಾರದ ಮಾರ್ಗದರ್ಶನ ಕೇಳಲಾಗಿದ್ದು, ಸರ್ಕಾರದಿಂದ ಉತ್ತರ ಬಂದ ನಂತರ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ. ಮುಂದುವರೆದು, ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಇಡಿ 496 ಯುಆರ್‌ಸಿ 2015 ದಿನಾಂಕ: 20-04-2017ರಂತೆ ನೇಮಕಾತಿ ಪ್ರಾಧಿಕಾರವು ರಾಣಿ ಚನ್ನಮ್ಮ ವಿಶ್ವವಿದ್ಯಾಲಯವೇ ಆಗಿರುವುದರಿಂದ ನಿಯಮಾನುಸಾರ ಸರ್ಕಾರದ ಆದೇಶ, ಸುತ್ತೋಲೆಗಳು, ನಿಯಮಾವಳಿಗಳು ಹಾಗೂ ಪ್ರಸ್ತುತ ಜಾರಿಯಲ್ಲಿರುವ ನಿಯಮಾನುಸಾರ ಪರಿಶೀಲಿಸಿ ವಿಶ್ವವಿದ್ಯಾಲಯದ ಮಟ್ಟದಲ್ಲಿಯೇ ಕ್ರಮಕೈಕೊಳ್ಳಲು ನಿರ್ದೇಶಿಸಿದ್ದಾರೆ. ಕಾರಣ, ಪಿಂಚಣಿ ಮಂಜೂರಾತಿ ಪ್ರಕ್ರಿಯೆಯನ್ನು ಮುಂದುವರೆಸಲು, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರ ಪತ್ರ ದಿನಾಂಕ: 20-04-2017ರಲ್ಲಿನ ಅಂಶಗಳನ್ನು ಈ ಕಛೇರಿ ಪತ್ರ ಸಂಖ್ಯೆ: 2018-19/6089, ದಿನಾಂಕ: 30-03-2019ರಲ್ಲಿ ಉಲ್ಲೇಖಿಸುತ್ತಾ, ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಪಿಂಚಣಿ ವಂತಿಕೆಯನ್ನು ವರ್ಗಾವಣೆ ಮಾಡಲು ಕೋರಿ ಪತ್ರ ಬರೆಯಲಾಗಿದೆ. ಇಲ್ಲಿಯವರೆಗೆ ಯಾವುದೇ ಉತ್ತರ ಬಂದಿರುವುದಿಲ್ಲ. ಪ್ರೊ.(ಶ್ರೀಮತಿ) ಎಚ್.ಎಂ. ಶೈಲಜಾ, ಇವರು ದಿನಾಂಕ: 16-05-2019ರಂದು ಸಲ್ಲಿಸಿರುವ ಮನವಿ ಪತ್ರದಲ್ಲಿ ದಿನಾಂಕ: 01-03-1997 ರಿಂದ ದಿನಾಂಕ: 09-07-2012ರ ವರೆಗಿನ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಲ್ಲಿಸಿದ ಸೇವಾವಧಿಯ ಪಿಂಚಣಿ ವಂತಿಕೆ ಮೊತ್ತವನ್ನು ಸ್ವತಃ ಭರಿಸಲು ಸಿದ್ಧರಿರುವುದಾಗಿ ತಿಳಿಸಿರುತ್ತಾರೆ. ಈ ರೀತಿ ಕಾನೂನಿನಲ್ಲಿ ಅವಕಾಶವಿರುವ ಕುರಿತು ಪರಿಶೀಲಿಸಿ, ಮರು ಮಂಡನೆ ಮಾಡಲು ಸಭೆಯು ಸೂಚಿಸಿತು. |
| 22 | 2019/06/22 | ಡಾ. ಮುಕುಂದ ಮುಂಡರಗಿ, ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ ಇವರ ಪರಿವೀಕ್ಷಣಾ ಅವಧಿಯನ್ನು ಘೋಷಿಸುವ ವಿಷಯವನ್ನು ಸಭೆಯ ಅವಗಾಹನೆಗೆ ಮಂಡಿಸುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ಬೋಧಕ ಸಿಬ್ಬಂದಿಗಳ ನೇಮಕಾತಿಗಾಗಿ |

| | | |
|---|---|---|
| | | ಅಧಿಸೂಚನೆ ಸಂಖ್ಯೆ: RCU/EST/E-1/2012-13/2329. Date: 03-10-2012gÀ ಮೂಲಕ ದಿನಾಂಕ: 03–11–2012ರ ಒಳಗಾಗಿ ಅರ್ಜಿ ಸಲ್ಲಿಸುವಂತೆ ತಿಳಿಸಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಅದರಂತೆ, ಡಾ. ಮುಕುಂದ ಮುಂಡಗಿ, ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ, ರಾ.ಚ.ವಿ. ಬೆಳಗಾವಿ ಇವರು ಅರ್ಜಿ ಸಂಖ್ಯೆ:AC00069ರ ಮೂಲಕ ಅರ್ಜಿಯನ್ನು ಸಲ್ಲಿಸಿರುತ್ತಾರೆ. ದಿನಾಂಕ: 16–05–2013ರಂದು ನಡೆದ ಆಯ್ಕೆ ಸಮಿತಿಯ ಸಭೆಯು ನಡೆಸಿದ ಸಂದರ್ಶನಕ್ಕೆ ಹಾಜರಾಗಿರುತ್ತಾರೆ. ನಂತರ ಆಯ್ಕೆ ಸಮಿತಿಯ ಶಿಫಾರಸ್ಸಿನ ಮೇರೆಗೆ ದಿನಾಂಕ: 27–08–2013ರಂದು ನಡೆದ ಸಿಂಡಿಕೇಟ್ ಸಭೆಯ ತೀರ್ಮಾನ ಸಂಖ್ಯೆ: 24ಕ್ಕೆ ಸಂಬಂಧಿಸಿ ಮಾನ್ಯ ಕುಲಪತಿಗಳು ದಿನಾಂಕ: 27–08–2013ರಂದು ನೀಡಿದ ಅನುಮೋದನೆಯಂತೆ ಸದರಿಯವರಿಗೆ ಆದೇಶ ಸಂಖ್ಯೆ: RCU/EST/E-1/2012-13/03-10-2012/3415. Date: 27-08-2012ರ ಮೂಲಕ ನೇಮಕಾತಿ ಆದೇಶವನ್ನು ನೀಡಲಾಗಿತ್ತು. ಸದರಿ ಆದೇಶದನ್ವಯ ಡಾ. ಮುಕುಂದ ಮುಂಡಗಿ ಇವರು ದಿನಾಂಕ: 27–08–2013ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ.<br>ದಿನಾಂಕ: 26–08–2016ರಲ್ಲಿ ನಡೆದ ಸಿಂಡಿಕೇಟ್ ಸಭೆಯಲ್ಲಿ, ನ್ಯಾಯಾಲಯದಲ್ಲಿ ಪ್ರಕರಣಗಳಿರುವ ಬೋಧಕ ಸಿಬ್ಬಂದಿಗಳ, ನೇಮಕಾತಿ ಆದೇಶದಲ್ಲಿ ಕಡ್ಡಾಯವಾಗಿ NET/ SLET ಪರೀಕ್ಷೆಗಳನ್ನು ಉತ್ತೀರ್ಣರಾಗಬೇಕೆಂಬ ಶಿಫಾರಸ್ಸನ್ನು ಹೊಂದಿರುವ ಬೋಧಕ ಸಿಬ್ಬಂದಿಗಳ ಹಾಗೂ NET/ SLET/ Ph.D ಹೊಂದಿರದೇ ಕೇವಲ ಎಂ.ಸಿ.ಎ. ಪದವಿ ಮೇಲೆ ನೇಮಕಗೊಂಡು, ನಂತರ Ph.D ಪದವಿ ಪಡೆದುಕೊಂಡ ಗಣಕವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕಿಯಾದ ಶ್ರೀಮತಿ ಮಲ್ಲಮ್ಮ ರೆಡ್ಡಿ ಇವರುಗಳ ಪರಿವೀಕ್ಷಣಾ ಅವಧಿಯನ್ನು ಘೋಷಿಸಲಾಗಿರುವುದಿಲ್ಲ ಎಂಬುದನ್ನು ಕುಲಸಚಿವರು ಸಭೆಯ ಸದಸ್ಯರ ಗಮನಕ್ಕೆ ತಂದಾಗ, ಸದರಿ ವಿಷಯದ ಕುರಿತಾಗಿ ಸರ್ಕಾರದ ನಿರ್ದೇಶನ ಕೋರಿ ಪತ್ರ ಬರೆಯುವಂತೆ ಕುಲಸಚಿವರಿಗೆ ಸಭೆಯು ಸೂಚನೆ ನೀಡಿತ್ತು.<br>ಸದರಿ ಸೂಚನೆಯಂತೆ ಪತ್ರ ಸಂಖ್ಯೆ: ರಾಚವಿ/ಬೆಳಗಾವಿ/ಸಿಆಸುವಿ/2016–17/5409. ದಿನಾಂಕ: 19–12–2016ರ ಮೂಲಕ ಕುಲಸಚಿವರು ಸದರಿ ವಿಷಯದ ಕುರಿತಾಗಿ ಸರ್ಕಾರದ ನಿರ್ದೇಶನ ಕೋರಿದ್ದರು. ಸದರಿ ಪತ್ರಕ್ಕೆ ಸಂಬಂಧಿಸಿದಂತೆ ಸರ್ಕಾರವು ಪತ್ರ ಸಂಖ್ಯೆ: ಇಡಿ 14 ಯುಆರ್‌ಸಿ 2016. ದಿನಾಂಕ: 10–03–2017ರ ಮೂಲಕ ಸದರಿ ವಿಷಯವನ್ನು ಪರಿಶೀಲಿಸಲು ಕೆಲವು ಮಾಹಿತಿ/ ಸ್ಪಷ್ಟೀಕರಣ ಸಲ್ಲಿಸುವಂತೆ ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಿದಾಗ ಸರ್ಕಾರವು ಕೋರಿದ ಮಾಹಿತಿಯನ್ನು ವಿಶ್ವವಿದ್ಯಾಲಯವು ಪತ್ರ ಸಂಖ್ಯೆ: ರಾಚವಿ/ಬೆಳಗಾವಿ/ಕುಸಕಾ/ ಸಿಆಸುವಿ/2017–18/3399. ದಿನಾಂಕ: 07–12–2017ರ ಮೂಲಕ ಒದಗಿಸಲಾಗಿತ್ತು.<br>ನಂತರ ಸರ್ಕಾರವು ಪತ್ರ ಸಂಖ್ಯೆ: ಇಡಿ 13 ಯುಆರ್‌ಸಿ 2017 ದಿ: 16–3–2019ರ ಮೂಲಕ ಡಾ. ಫಯಾಜ್ ಅಹಮದ್ ಇಳಕಲ್ ಹಾಗೂ ಡಾ. ಎಂ.ಎಂ. ಮುಂಡರಗಿ ಇವರ ನೇಮಕಾತಿ ಕುರಿತು ನ್ಯಾಯಾಲಯದಲ್ಲಿ ವಿಚಾರಣೆಗಳು ಬಾಕಿ ಇಲ್ಲದಿದ್ದಲ್ಲಿ ನೇಮಕಾತಿ ಪ್ರಾಧಿಕಾರ ವಿಶ್ವವಿದ್ಯಾಲಯವೇ ಆಗಿರುವುದರಿಂದ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಮಾರ್ಗಸೂಚಿಸಿ/ ಯುಜಿಸಿ ಮಾರ್ಗಸೂಚಿಗಳನ್ವಯ ಪರಿವೀಕ್ಷಣಾ ಅವಧಿ ಘೋಷಿಸಲು ನಿಯಮಾನುಸಾರ ಕ್ರಮಕೈಗೊಳ್ಳುವಂತೆ ಹಾಗೂ ಕೈಗೊಂಡ ಕ್ರಮದ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ನಿರ್ದೇಶನ ನೀಡಿತ್ತು. ಸರ್ಕಾರದ ನಿರ್ದೇಶನದಂತೆ ಸದರಿ ಸಿಬ್ಬಂದಿಯ ಪರಿವೀಕ್ಷಣಾ ಅವಧಿ ಘೋಷಿಸುವ ವಿಷಯವನ್ನು ದಿನಾಂಕ: 06–08–2018ರಂದು ನಡೆದ ಸಿಂಡಿಕೇಟ್ ಮಂಡಿಸಲಾಗಿ, ಸಭೆಯು ಸದರಿ ವಿಷಯವನ್ನು ಮುಂದೂಡಿತ್ತು. |

| | | |
|---|---|---|
| | | ನಂತರ ಸರ್ಕಾರವು ಪತ್ರ ಸಂಖ್ಯೆ: ಇಡಿ 41 ಯುಆರ್‌ಸಿ 2019. ದಿನಾಂಕ: 22-02-2019ರ ಮೂಲಕ ಡಾ. ಮುಕುಂದ ಮುಂಡರಗಿ ಇವರ ಪರಿವೀಕ್ಷಣಾ ಅವಧಿಯನ್ನು ಎರಡು ವರ್ಷಗಳ ನಂತರ ಘೋಷಿಸಬೇಕಾಗಿತ್ತು. ಆದರೆ ಪರಿವೀಕ್ಷಣಾ ಅವಧಿಯನ್ನು ಘೋಷಿಸಲು ಸರ್ಕಾರದ ನಿರ್ದೇಶನ ಕೋರಿದ್ದಕ್ಕೆ, ನೇಮಕಾತಿ ಪ್ರಾಧಿಕಾರ ವಿಶ್ವವಿದ್ಯಾಲಯವೇ ಆಗಿರುವುದರಿಂದ ವಿಶ್ವವಿದ್ಯಾಲಯದ ಮಟ್ಟದಲ್ಲಿಯೇ ಕ್ರಮಕೈಗೊಂಡು ವರದಿ ಸಲ್ಲಿಸಲು ತಿಳಿಸಿದ್ದರೂ ಪರಿವೀಕ್ಷಣಾ ಅವಧಿಯನ್ನು ಘೋಷಿಸಿರುವ ಬಗ್ಗೆ ವರದಿಯನ್ನು ಸಲ್ಲಿಸಿರುವುದಿಲ್ಲವೆಂದು ಆಕ್ಷೇಪಿಸಿ, ಅವರಂತೆ ಬೋಧಕರಾಗಿ ನೇಮಕಗೊಂಡಿರುವ ಇತರರ ಪರಿವೀಕ್ಷಣಾ ಅವಧಿಯನ್ನು ಘೋಷಿಸಿರುತ್ತೀರಿ. ಸದರಿಯವರಿಗೆ ಯಾವುದೇ ಕಾರಣವನ್ನು ನೀಡದೇ ಅವರ ಅರ್ಜಿಗೆ ಉತ್ತರಿಸದೇ ಹಾಗೂ ಸರ್ಕಾರದ ಪತ್ರಗಳು ನಿರ್ದೇಶನ ಪರಿಪಾಲಿಸದೇ ಕರ್ತವ್ಯಲೋಪ ಎಸಗಿರುತ್ತೀರೆಂದು, ಪತ್ರ ತಲುಪಿದ ಒಂದು ವಾರದ ಒಳಗಾಗಿ ಲಿಖಿತ ಉತ್ತರ ನೀಡುವಂತೆ ಕಾರಣ ಕೇಳಿ ನೋಟಿಸ್ ನೀಡಿತ್ತು. ನಂತರ ಪತ್ರ ಸಂಖ್ಯೆ: ರಾಚವಿ/ಬೆಳಗಾವಿ/ಸಿಆಸುವಿ/2018-19/5758/2, ದಿನಾಂಕ: 14-03-2019ರ ಸಕ್ಷಮ ಪ್ರಾಧಿಕಾರವು ಸದರಿಯವರ ಪರಿವೀಕ್ಷಣಾ ಅವಧಿ ಘೋಷಿಸುವಲ್ಲಿ ಕುಲಸಚಿವರಿಂದ ಯಾವುದೇ ತಾತ್ಸಾರ ಮನೋಭಾವನೆಯಾಗಲೀ ವಿಳಂಬಧೋರಣೆಯನ್ನಾಗಲೀ ಹೊಂದಿಲ್ಲವೆಂದು ಹಾಗೂ ಸರ್ಕಾರದ ನಿರ್ದೇಶನವನ್ನು ಸಕ್ಷಮ ಪ್ರಾಧಿಕಾರದ ಗಮನಕ್ಕೆ ತಂದು, ಸಕ್ಷಮ ಪ್ರಾಧಿಕಾರದ ನಿರ್ಣಯದನ್ವಯ ಕ್ರಮಕೈಗೊಳ್ಳಲಾಗುವುದೆಂದು ಕುಲಸಚಿವರು ಪತ್ರ ಬರೆದಿರುವ ವಿಷಯವನ್ನು ಸಭೆಯ ಗಮನಕ್ಕೆ ತರಲಾಯಿತು.<br>ಸಿಂಡಿಕೇಟ್ ಸಭೆಯ ನಿರ್ಣಯದನ್ವಯ ಕ್ರಮಕೈಗೊಂಡ ಕುಲಸಚಿವರಿಗೆ ಸರ್ಕಾರವು ನೋಟಿಸನ್ನು ನೀಡಿರುವುದಕ್ಕೆ ಸಿಂಡಿಕೇಟ್ ಸಭೆಯು ವಿಷಾದ ವ್ಯಕ್ತಪಡಿಸಿತು.<br>ನಂತರ, ಡಾ. ಮುಕುಂದ ಮುಂಡಗಿ, ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ, ರಾ.ಚ.ವಿ. ಬೆಳಗಾವಿ ಇವರಿಗೆ ಸಂಬಂಧಿಸಿದ ಕಡತಗಳನ್ನು ತರಿಸಿಕೊಂಡು ಪರಿಶೀಲಿಸಲಾಗಿ, ದಿನಾಂಕ: 06-03-2013ರಲ್ಲಿ ಪಿ.ಹೆಚ್.ಡಿ. ಪದವಿಯನ್ನು ಪಡೆದಿದ್ದನ್ನು ಗಮನಿಸಿದ ಸಿಂಡಿಕೇಟ್ ಸಭೆಯು, ಸದರಿಯವರು ನೇಮಕಾತಿಗೆ ಅರ್ಜಿ ಸಲ್ಲಿಸುವ ಸಮಯದಲ್ಲಿ ಪಿ.ಹೆಚ್.ಡಿ. ಪದವಿ ಪಡೆದುಕೊಂಡಿರಲಿಲ್ಲವೆಂಬುದನ್ನು ಖಚಿತಪಡಿಸಿಕೊಂಡಿತು. ಅಲ್ಲದೇ, ಸದರಿಯವರಿಗೆ ನೀಡಲಾಗಿದ್ದ ನೇಮಕಾತಿ ಆದೇಶದಲ್ಲಿ ಕಾಣಿಸಲಾಗಿದ್ದ **'The BOA suggest that the candidate should clear NET/ SLET within two years failing which his increments would be stopped'** ಎಂಬ ಷರತ್ತನ್ನು ಕೂಡಾ ಸದರಿಯವರು ಪೂರೈಸದೇ ಇರುವುದನ್ನು ಕೂಡಾ ಗಮನಿಸಿತು. ತದನಂತರ, ಡಾ. ಮುಕುಂದ ಮುಂಡರಗಿ ಇವರು ನೇಮಕಾತಿಗೆ ಅರ್ಜಿ ಸಲ್ಲಿಸುವ ಸಮಯದಲ್ಲಿ ಪಿ.ಹೆಚ್.ಡಿ. ಪದವಿಯನ್ನು ಹೊಂದದೇ ಇದ್ದುದ್ದರಿಂದ ಹಾಗೂ ನೇಮಕಾತಿ ಆದೇಶದಲ್ಲಿರುವ ಷರತ್ತನ್ನು ಇವರು ಪಾಲಿಸದೇ ಇದ್ದರೂ ಕೂಡಾ ಸದರಿಯವರ ಪರಿವೀಕ್ಷಣಾ ಅವಧಿಯನ್ನು ಘೋಷಿಸಬೇಕೇ ಎಂಬುದರ ಬಗ್ಗೆ ಸ್ಪಷ್ಟವಾದ ಹಾಗೂ ನೇರವಾದ ನಿರ್ದೇಶನ ನೀಡುವಂತೆ ಸರ್ಕಾರಕ್ಕೆ ಪತ್ರ ಬರೆಯುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿತು. |
| 23 | 2019/06/23 | ಡಾ. ಫಯಾಜ ಇಳಕಲ್, ಸಹಾಯಕ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ ಇವರ ಪರಿವೀಕ್ಷಣಾ ಅವಧಿಯನ್ನು ಘೋಷಿಸುವ ವಿಷಯವನ್ನು ಸಭೆಯ ಅವಗಾಹನೆಗೆ ಮಂಡಿಸುವ ಕುರಿತು. |
| | ತೀರ್ಮಾನ | ಡಾ. ಫಯಾಜ ಇಳಕಲ್, ಸಹಾಯಕ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ ಇವರ ಪರಿವೀಕ್ಷಣಾ ಅವಧಿಯನ್ನು ಘೋಷಿಸಲು ಸಭೆಯು ಅನುಮೋದನೆ ನೀಡಿತು. |

| | | |
|---|---|---|
| 24 | 2019/06/24 | ಕರ್ನಾಟಕ ಸರಕಾರದ ಆದೇಶದನ್ವಯ, ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳಿಗೆ ಯು.ಜಿ.ಸಿ.ಯ 7ನೇ ವೇತನ ಆಯೋಗದ ವೇತನ ಶ್ರೇಣಿಯನ್ನು ಜಾರಿಗೊಳಿಸಲು ಅನುಮೋದನೆ ನೀಡುವ ಕುರಿತು. |
| | ತೀರ್ಮಾನ | ಕರ್ನಾಟಕ ಸರಕಾರದ ಆದೇಶದನ್ವಯ, ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳಿಗೆ ಯು.ಜಿ.ಸಿ.ಯ 7ನೇ ವೇತನ ಆಯೋಗದ ವೇತನ ಶ್ರೇಣಿಯನ್ನು ಜಾರಿಗೊಳಿಸಲು ಸಭೆಯು ಅನುಮೋದನೆ ನೀಡಿತು. |
| 25 | 2019/06/25 | ಪ್ರೊ ಎನ್. ಮಾರುತಿರಾವ್ ಇವರ ಮೇಲಿನ ಇಲಾಖಾ ವಿಚಾರಣೆ ನಡೆಸಿದ ವಿಚಾರಣಾಧಿಕಾರಿಗಳು ಹಾಗೂ ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರಿಗೆ ಶುಲ್ಕ ಸಂದಾಯ ಮಾಡಲು ಕೈಗೊಂಡ ಕ್ರಮಕ್ಕೆ ಅನುಸಮರ್ಥನೆ ನೀಡುವ ಕುರಿತು. |
| | ತೀರ್ಮಾನ | ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು. |
| 26 | 2019/06/26 | ಪ್ರೊ ಎನ್. ಮಾರುತಿರಾವ್ ಇವರ ಮೇಲಿನ ಇಲಾಖಾ ವಿಚಾರಣೆಯಲ್ಲಿ ವಿಶ್ವವಿದ್ಯಾಲಯದ ಪರವಾಗಿ ವಾದ ಮಂಡಿಸಿದ ಮಂಡನಾಧಿಕಾರಿಗಳಿಗೆ ಶುಲ್ಕ, ಪ್ರಯಾಣ ಹಾಗೂ ಇತರೆ ಖರ್ಚುಗಳ ಮೊತ್ತವನ್ನು ಸಂದಾಯ ಮಾಡಲು ಕೈಗೊಂಡ ಕ್ರಮಕ್ಕೆ ಅನುಸಮರ್ಥನೆ ನೀಡುವ ಕುರಿತು. |
| | ತೀರ್ಮಾನ | ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು. |
| 27 | 2019/06/27 | ಪ್ರೊ ಎನ್. ಮಾರುತಿರಾವ್ ಇವರ ಮೇಲೆ ಮಾಡಲಾದ ಆಪಾದನೆಗಳಿಗೆ ಸಂಬಂಧಿಸಿದಂತೆ ನಡೆಸಲಾದ ಇಲಾಖಾ ವಿಚಾರಣೆ ವರದಿಯ ಕುರಿತು. |
| | ತೀರ್ಮಾನ | ಪ್ರೊ. ಎನ್. ಮಾರುತಿರಾವ್ ಇವರ ವಿರುದ್ಧ ನೇಮಿಸಲಾಗಿದ್ದ ಇಲಾಖಾ ವಿಚಾರಣೆಯ ವಿಚಾರಣಾಧಿಕಾರಿಗಳು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ್ದ ವರದಿಯನ್ನು ಮತ್ತು ಸಂಬಂಧಿಸಿದ ಸಾಕ್ಷಿ, ಪುರಾವೆಗಳನ್ನು ಸಿಂಡಿಕೇಟ್ ಸಭೆಯ ಗಮನಕ್ಕೆ ತರಲಾಯಿತು.<br>ಸದರಿ ಮುಚ್ಚಿದ ಲಕೋಟೆಯನ್ನು ಸಭೆಯಲ್ಲಿ ತೆರೆದು, ವರದಿಯನ್ನು ಹಾಗೂ ಸಾಕ್ಷಿ, ಪುರಾವೆಗಳನ್ನು ಸಭೆಯ ಗಮನಕ್ಕೆ ತರಲಾಯಿತು. ತದನಂತರ ಸಿಂಡಿಕೇಟ್ ಸದಸ್ಯರು ವರದಿ ಹಾಗೂ ಸಾಕ್ಷಿ, ಪುರಾವೆಗಳನ್ನು ಪರಿಶೀಲಿಸಿ, ಸುಧೀರ್ಘ ಚರ್ಚೆಯನ್ನು ನಡೆಸಿದರು.<br>ಸುಧೀರ್ಘ ಚರ್ಚೆಯ ನಂತರ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವರದಿಯನ್ವಯ ಪ್ರೊ. ಎನ್. ಮಾರುತಿರಾವ್ ಇವರ ಮೇಲಿನ **1, 3** ಹಾಗೂ **4** ಆರೋಪಗಳು ರುಜುವಾತು ಆಗಿರುವುದನ್ನು ಸಭೆಯು ತಾತ್ಕಾಲಿಕವಾಗಿ ಒಪ್ಪಿಕೊಂಡಿತು.<br>ಮುಂದುವರೆದು, ಸದರಿ ವಿಷಯದ ಕುರಿತಾಗಿ ಕರ್ನಾಟಕ ವಿಶ್ವವಿದ್ಯಾಲಯದ ನೌಕಕರ ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ ನಿಯಮಗಳು–1998ರ ನಿಯಮಗಳನ್ವಯ ಮುಂದಿನ ಕ್ರಮಕೈಗೊಳ್ಳುವುದಕ್ಕೆ ಸಂಬಂಧಿಸಿ, ವಿಶ್ವವಿದ್ಯಾಲಯದ ಹಿರಿಯ ಕಾನೂನು ಸಲಹೆಗಾರರ ಅಭಿಪ್ರಾಯ ಪಡೆದು ಮುಂದುವರೆಯಲು ಸೂಚಿಸಿತು. |
| 28 | 2019/06/28 | ಪ್ರೊ ಎನ್. ಮಾರುತಿರಾವ್ ಇವರು ಕೆಲವು ದಾಖಲೆಗಳನ್ನು ಒದಗಿಸುವಂತೆ ಹಾಗೂ ಅಮಾನತ್ತನ್ನು ರದ್ದುಗೊಳಿಸುವಂತೆ ಬರೆದ ಪತ್ರಗಳಿಗೆ ಸಂಬಂಧಿಸಿದಂತೆ ಹಿರಿಯ ಕಾನೂನು ಸಲಹೆಗಾರರು ನೀಡಿರುವ ಸಲಹೆಯ ಕುರಿತು. |
| | ತೀರ್ಮಾನ | ಪ್ರೊ. ಎನ್. ಮಾರುತಿರಾವ್ ಇವರು ಕೆಲವು ದಾಖಲೆಗಳನ್ನು ಒದಗಿಸುವಂತೆ ಹಾಗೂ ಅಮಾನತ್ತನ್ನು ರದ್ದುಗೊಳಿಸುವಂತೆ ಬರೆದ ಪತ್ರಗಳನ್ನು ಹಾಗೂ ಅವುಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ಹಿರಿಯ ಕಾನೂನು ಸಲಹೆಗಾರರು ನೀಡಿರುವ ಸಲಹೆಯ ಪತ್ರವನ್ನು ಸಭೆಯ ಮುಂದೆ ಪ್ರಸ್ತುತಪಡಿಸಲಾಯಿತು. ಅವುಗಳನ್ನು |

| | | |
|---|---|---|
| | | ಅವಲೋಕಿಸಿದ ಸಿಂಡಿಕೇಟ್ ಸಭೆಯು, ಪ್ರೊ. ಎನ್. ಮಾರುತಿರಾವ್ ಇವರು ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ಪೀಠದಲ್ಲಿ ಸಲ್ಲಿಸಿದ್ದ ರಿಟ್ ಪಿಟಿಷನ್ ಸಂಖ್ಯೆ: **104077/2018**ನೇದ್ದಕ್ಕೆ ಸಲ್ಲಿಸಿದ್ದ ಮಧ್ಯಂತರ ಅರ್ಜಿಯಲ್ಲಿ ಸಕ್ಷಮ ಪ್ರಾಧಿಕರದಿಂದ ಎಲ್ಲಾ ದಾಖಲೆಗಳನ್ನು ಪಡೆದುಕೊಂಡಿರುವುದಾಗಿ ಒಪ್ಪಿಕೊಂಡಿರುವುದನ್ನು ಗಮನಿಸಲಾಯಿತು.<br>ಮುಂದುವರೆದು, ರಿಟ್ ಪಿಟಿಷನ್ ಸಂಖ್ಯೆ: **104077/2018**ನೇದ್ದಕ್ಕೆ ಸಂಬಂಧಿಸಿ, ನ್ಯಾಯಾಲಯವು ನೀಡಿದ್ದ ಆದೇಶದಂತೆ ಇಲಾಖಾ ವಿಚಾರಣೆಯು ಪೂರ್ಣಗೊಂಡು, ಸಲ್ಲಿಸಲಾಗಿದ್ದ ಇಲಾಖಾ ವಿಚಾರಣಾ ವರದಿಗೆ ಸಂಬಂಧಿಸಿ ಹಿಂದಿನ ವಿಷಯ ಸೂಚಿಗೆ ತೀರ್ಮಾನ ತೆಗೆದುಕೊಂಡಿದ್ದು, ಈಗ ವಿಚಾರಣಾ ವರದಿಯ ಅನುಸಾರ ಕ್ರಮಕೈಗೊಳ್ಳುವುದು ಮಾತ್ರ ಬಾಕಿ ಇರುವುದರಿಂದ ಹಾಗೂ ಸದರಿ ದಾಖಲೆಗಳು ವಿಚಾರಣೆಗೆ ಅನವಶ್ಯಕವಾಗಿವೆ ಹಾಗೂ ಅನವಶ್ಯಕ ಒತ್ತಡ ಹಾಕುವ ಉದ್ದೇಶದಿಂದ ಕೆಲವು ದಾಖಲೆಗಳನ್ನು ನೀಡುವಂತೆ ಕೋರಿ ಬರೆದಿರುವ ಪತ್ರಗಳು ತಿರಸ್ಕರಿಸಲು ಯೋಗ್ಯವಾಗಿವೆ ಎಂದು ಅಭಿಪ್ರಾಯ ಪಟ್ಟಿರುವುದರಿಂದ ಸದರಿ ಪತ್ರಗಳನ್ನು ತಿರಸ್ಕರಿಸಲು ನಿರ್ಧರಿಸಿತು ಹಾಗೂ ಅವರ ಅಮಾನತ್ತನ್ನು ರದ್ದುಗೊಳಿಸಲು ಕೋರಿ ಬರೆದಿರುವ ಪತ್ರಗಳಿಗೆ ಸಂಬಂಧಿಸಿ ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ವಯ ಕ್ರಮಕೈಗೊಳ್ಳಲು ತೀರ್ಮಾನಿಸಿತು. |
| 29 | 2019/06/29 | ಕುವೆಂಪು ಹಾಗೂ ಮೈಸೂರು ವಿಶ್ವವಿದ್ಯಾಲಯದ ಭೌಗೋಳಿಕ ವ್ಯಾಪ್ತಿಯ ಹೊರಗೆ ಕರ್ನಾಟಕದಲ್ಲಿ ಹೊಸದಾಗಿ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಲು ಅನುಮತಿ ನೀಡುವ ಕುರಿತು. |
| | ತೀರ್ಮಾನ | ಸದರಿ ವಿಷಯವನ್ನು ಸಭೆಯು ಮುಂದೂಡಿತು. |
| 30 | 2019/06/30 | ಸಿಂಡಿಕೇಟ್ ಸದಸ್ಯರಾದ ಶ್ರೀ ನರಸಿಂಹ ರಾಯಚೂರ ಇವರ ವಿಷಯಗಳ ಬಗ್ಗೆ ಚರ್ಚಿಸುವ ಕುರಿತು.<br>➢ ಜಿಲ್ಲಾವಾರು ಪರೀಕ್ಷಾ ಕೇಂದ್ರಗಳ ರೆಗ್ಯೂಲರ್ ವಿದ್ಯಾರ್ಥಿಗಳ ಸಮಗ್ರ ಪಟ್ಟಿ.<br>➢ ಎಂ.ಪಿ.ಸಿ. ಆದ ಕೇಂದ್ರಗಳಿಂದ ದಂಡ ಪಾವತಿ ಆದ ಬಗ್ಗೆ ವಿವರಣೆ. |
| | ತೀರ್ಮಾನ | ಸಿಂಡಿಕೇಟ್ ಸದಸ್ಯರಾದ ಶ್ರೀ ನರಸಿಂಹ ರಾಯಚೂರ ಇವರ ಕೇಳಿರುವ ಜಿಲ್ಲಾವಾರು ಪರೀಕ್ಷಾ ಕೇಂದ್ರಗಳ ರೆಗ್ಯೂಲರ್ ವಿದ್ಯಾರ್ಥಿಗಳ ಸಮಗ್ರ ಪಟ್ಟಿಯ ಸಮಗ್ರ ಮಾಹಿತಿಯನ್ನು ಮಂಡಿಸದೇ ಇರುವುದಕ್ಕೆ ಸಭೆಯು ವಿಷಾದ ವ್ಯಕ್ತಪಡಿಸಿತು. ನಂತರ ಮುಂದಿನ ಸಿಂಡಿಕೇಟ್ ಸಭೆಗೆ ಸಮಗ್ರ ಮಾಹಿತಿಯನ್ನು ಒದಗಿಸುವಂತೆ ಸೂಚಿಸಿತು. ಅಂತೆಯೇ ಎಂಪಿ.ಸಿ. ಆದ ಕೇಂದ್ರಗಳಿಂದ ದಂಡ ಪಾವತಿಯಾಗದೇ ಇರುವುದಕ್ಕೆ ಅಸಮಾಧಾನವನ್ನು ವ್ಯಕ್ತಪಡಿಸಿ, ದಂಡದ ಮೊತ್ತವನ್ನು ಸಂಪೂರ್ಣವಾಗಿ ಪಾವತಿಮಾಡಿಕೊಳ್ಳಲು ಅಗತ್ಯ ಕ್ರಮಗಳನ್ನು ಕೈಗೊಂಡು, ವಿವರವನ್ನು ಮುಂದಿನ ಸಭೆಗೆ ಮಂಡಿಸಲು ಸೂಚಿಸಿತು. |
| **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರ ಚರ್ಚಿಸುವ ವಿಷಯಗಳು.** | | |
| I | 2019/06/I | ಡಾ. ಟಿ.ಎನ್. ತಾಂಡವಗೌಡ, ಸಹಾಯಕ ಪ್ರಾಧ್ಯಾಪಕರು, ಇಂಗ್ಲೀಷ ವಿಭಾಗ, ರಾಣಿಚನ್ನಮ್ಮ ವಿಶ್ವವಿದ್ಯಾಲಯ ಇವರನ್ನು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯಕ್ಕೆ ವರ್ಗಾವಣೆಗೆ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡುವ ಕುರಿತು. |
| | ತೀರ್ಮಾನ | ಸದರಿ ವಿಷಯವನ್ನು ಸಭೆಯು ಮುಂದೂಡಿತು. |
| II | 2019/06/II | ದಿನಾಂಕ 27-08-2019 ರಂದು ವಿಶ್ವವಿದ್ಯಾಲಯದ ಇಬ್ಬರು ವಿದ್ಯಾರ್ಥಿಗಳು ರಸ್ತೆ ಅಪಘಾತದಲ್ಲಿ ಗಾಯಗೊಂಡಿರುವುದರಿಂದ ಪರಿಹಾರ ನೀಡುವ ಕುರಿತು. |
| | ತೀರ್ಮಾನ | ದಿನಾಂಕ: **27-08-2019** ರಂದು ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ ರಸ್ತೆ |

| | | |
|---|---|---|
| | | ಅಪಘಾತದಲ್ಲಿ ಗಾಯಗೊಂಡ ವಿದ್ಯಾರ್ಥಿಗಳ ಬಗ್ಗೆ ಕುಲಸಚಿವರು ಸಭೆಯ ಗಮನಕ್ಕೆ ತಂದರು. ಸಭೆಯು ಸದರಿ ವಿಷಯದ ಕುರಿತು ಚರ್ಚಿಸಿದ ನಂತರ, ಅಪಘಾತದಲ್ಲಿ ಗಾಯಗೊಂಡ ವಿದ್ಯಾರ್ಥಿಗಳಿಗೆ ತಗಲುವ ಚಿಕಿತ್ಸೆಯ ವೆಚ್ಚವನ್ನು ವಿಶ್ವವಿದ್ಯಾಲಯದಿಂದ ಸಂದಾಯ ಮಾಡಲು ಸಭೆಯು ಅನುಮೋದನೆ ನೀಡಿತು. |
| III | 2019/06/III | ಪವಿತ್ರ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಹಿಂಬಡ್ತಿ ನೀಡಿದ ಅಧಿಕಾರಿಗಳಿಗೆ ಮುಂಬಡ್ತಿ ನೀಡಿ, ಸ್ಥಳ ನಿಯುಕ್ತಿಗೊಳಿಸುವ ಕುರಿತು. |
| | ತೀರ್ಮಾನ | ಪವಿತ್ರ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಹಿಂಬಡ್ತಿ ನೀಡಿದ ಅಧಿಕಾರಿಗಳಿಗೆ ಮುಂಬಡ್ತಿ ನೀಡಿ, ಸ್ಥಳ ನಿಯುಕ್ತಿಗೊಳಿಸುವ ಕುರಿತಂತೆ ಸಭೆಯಲ್ಲಿ ಚರ್ಚಿಸಲಾಯಿತು.<br>ಸಭೆಯು ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಹಿಂದೆ ರಚಿಸಲಾದ ಸಮಿತಿ ಸದಸ್ಯರಲ್ಲಿ ಇಬ್ಬರು ಸಿಂಡಿಕೇಟ್ ಸದಸ್ಯರ ಸದಸ್ಯತ್ವವನ್ನು ಸರಕಾರವು ಹಿಂಪಡೆದಿರುವುದರಿಂದ ಸದರಿ ಸಮಿತಿಯನ್ನು ಪುನರ್ ರಚಿಸಲು ಅನುಮೋದನೆ ನೀಡಿತು. ಸದರಿ ಸಮಿತಿಯ ಸಭೆಯಲ್ಲಿ ಹಿಂಬಡ್ತಿ ನೀಡಿದ ಸಿಬ್ಬಂದಿ/ ಅಧಿಕಾರಿಗಳಿಗೆ ಮುಂಬಡ್ತಿ ನೀಡಿ, ಸ್ಥಳ ನಿಯುಕ್ತಿಗೊಳಿಸುವ ವಿಷಯ ಕುರಿತು ಚರ್ಚಿಸಿ, ವರದಿ ನೀಡಲು ಸಭೆಯು ಸೂಚಿಸಿತು. |
| IV | 2019/06/IV | ಬೋಧಕೇತರ ಸಿಬ್ಬಂದಿಗಳಿಗೆ ಸರಕಾರದ ಸೌಲಭ್ಯಗಳನ್ನು ಒದಗಿಸುವ ಮತ್ತು ಪರಿವೀಕ್ಷಣಾ ಅವಧಿಯನ್ನು ಘೋಷಿಸುವ ಬಗ್ಗೆ ಸಿಂಡಿಕೇಟ್ ಸಭೆಯ ಮುಂದಿನ ಸೂಕ್ತ ನಿರ್ದೇಶನ ನೀಡುವ ಕುರಿತು. |
| | ತೀರ್ಮಾನ | ಸದರಿ ವಿಷಯಕ್ಕೆ ಸಂಬಂಧಿಸಿ, ಸಿಂಡಿಕೇಟ್ ಸದಸ್ಯರಾದ ಶ್ರೀ ನರಸಿಂಹ ರಾಯಚೂರ ಇವರು 2014ರ ಜುಲೈನಲ್ಲಿ ನೇಮಕಗೊಂಡ ಬೋಧಕೇತರ ಸಿಬ್ಬಂದಿಗಳ ಸೇವಾ ಪುಸ್ತಕಗಳನ್ನು ಸೃಜಿಸಿ, ದೃಢೀಕರಣ ಮತ್ತು ಕಾಲಾನುಕ್ರಮಗೊಳಿಸುವುದಕ್ಕೆ ಹಾಗೂ ನಿಯಮಾನುಸಾರ ನೀಡಬೇಕಾದ ಸೌಲಭ್ಯಗಳ ಕುರಿತಾಗಿ ದಿನಾಂಕ: 28-12-2018 ಮತ್ತು ದಿನಾಂಕ: 01-03-2019ರಂದು ನಡೆದ ಸಿಂಡಿಕೇಟ್ ಸಭೆಗಳಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಸಭೆಯಲ್ಲಿ ಪ್ರಸ್ತಾಪಿಸಿದರು ಹಾಗೂ ಈ ಕುರಿತು ವಿಶ್ವವಿದ್ಯಾಲಯ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ಕೋರಿದರು.<br>ಶ್ರೀ ನರಸಿಂಹ ರಾಯಚೂರ ಇವರು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿ, ಹಿರಿಯ ಕಾನೂನು ಸಲಹೆಗಾರರು ನೀಡಿದ ಸಲಹೆಯಂತೆ ಹಾಗೂ ಸಿಂಡಿಕೇಟ್ ಸಭೆಯ ನಿರ್ಣಯಗಳಂತೆ 2014ರ ಜುಲೈನಲ್ಲಿ ನೇಮಕಗೊಂಡ ಬೋಧಕೇತರ ಸಿಬ್ಬಂದಿಗಳ ಸೇವಾ ಪುಸ್ತಕಗಳನ್ನು ದೃಢೀಕರಣ ಮತ್ತು ಕಾಲಾನುಕ್ರಮಗೊಳಿಸುವುದಕ್ಕೆ ಸಂಬಂಧಿಸಿದಂತೆ ನೇಮಕಾತಿ ಅವಧಿಯಲ್ಲಿ ಕುಲಸಚಿವರಾಗಿದ್ದ ಪ್ರೊ. ವ್ಹಿ.ಎಸ್. ಚಟಪಲ್ಲಿ ಇವರಿಗೆ ಕಛೇರಿ ಪತ್ರ ಸಂಖ್ಯೆ: ರಾಚವಿ/ಬೆಳಗಾವಿ/ಕುಸಕಾ/ಸಿಆಸುವಿ/2018-19/4886. ದಿನಾಂಕ: 11-01-2019ರ ಮೂಲಕ ಸಿಂಡಿಕೇಟ್ ಸಭೆಯ ನಿರ್ಣಯವನ್ನು ತಿಳಿಸಿ, ಸದರಿ ಸಿಬ್ಬಂದಿಗಳ ಸೇವಾ ಪುಸ್ತಕಗಳನ್ನು ಸೃಜಿಸಿ, ದೃಢೀಕರಣಗೊಳಿಸುವಂತೆ ತಿಳಿಸಲಾಗಿತ್ತು. ಅದರಂತೆ ಅವರು ವಿಶ್ವವಿದ್ಯಾಲಯಕ್ಕೆ ದಿನಾಂಕ: 18-01-2019ರಂದು ಆಗಮಿಸಿ, ಅವರ ಅವಧಿಯಲ್ಲಿನ ಸೇವಾ ಪುಸ್ತಕಗಳಲ್ಲಿನ ನಮೂದುಗಳಿಗೆ ರುಜು ಮಾಡಿ, ಸೇವಾ ಪುಸ್ತಕಗಳನ್ನು ಸೃಜಿಸಿ, ದೃಢೀಕರಣ ಮಾಡಿರುತ್ತಾರೆ.<br>ನಂತರದ ಅವಧಿಯಲ್ಲಿ ಕುಲಸಚಿವರಾಗಿದ್ದ ಪ್ರೊ. ಶಾಂತಿನಾಥ ದಿಬ್ಬದ ಇವರಿಗೂ ಕೂಡಾ ಕಛೇರಿ ಪತ್ರ ಸಂಖ್ಯೆ: ರಾಚವಿ/ಬೆಳಗಾವಿ/ಕುಸಕಾ/ಸಿಆಸುವಿ/2018-19/5497. ದಿನಾಂಕ: 21-02-2019ರ ಮೂಲಕ ಸಿಂಡಿಕೇಟ್ ಸಭೆಯ ನಿರ್ಣಯವನ್ನು ತಿಳಿಸಿ, ಸದರಿ ಸಿಬ್ಬಂದಿಗಳ ಸೇವಾ ಪುಸ್ತಕಗಳನ್ನು ದೃಢೀಕರಣಗೊಳಿಸುವಂತೆ ತಿಳಿಸಲಾಗಿತ್ತು. ಅಲ್ಲದೇ |

| | | |
|---|---|---|
| | | ಬೋಧಕೇತರ ಸಿಬ್ಬಂದಿಗಳ ಸೇವಾಪುಸ್ತಕಗಳ ದೃಢೀಕರಣಗೊಳಿಸುವುದಕ್ಕೆ ಸಂಬಂಧಿಸಿ ಪ್ರೊ. ಶಾಂತಿನಾಥ ದಿಬ್ಬದ ಇವರೊಂದಿಗೆ ಮೌಖಿಕವಾಗಿ ಹಾಗೂ ದೂರವಾಣಿ ಮೂಲಕ ಕೂಡಾ ವಿನಂತಿಸಲಾಗಿತ್ತು. ಆದರೆ, ಸದರಿ ವಿಷಯಕ್ಕೆ ಸಂಬಂಧಿಸಿ ಪ್ರೊ. ಶಾಂತಿನಾಥ ದಿಬ್ಬದ ಇವರು ಯಾವುದೇ ನಿರ್ಧಾರವನ್ನು ತಿಳಿಸಿರುವುದಿಲ್ಲವೆಂಬ ಮಾಹಿತಿಯನ್ನು ಕುಲಸಚಿವರು ಸಭೆಯ ಗಮನಕ್ಕೆ ತಂದರು.<br>ನಂತರ, ಸದರಿ ವಿಷಯದ ಕುರಿತಾಗಿ ಸುಧೀರ್ಘ ಚರ್ಚೆಯನ್ನು ನಡೆಸಲಾಯಿತು. ಸದರಿ ಬೋಧಕೇತರ ಸಿಬ್ಬಂದಿಗಳ ಸೇವಾ ಪುಸ್ತಕಗಳ ದೃಢೀಕರಣ ಹಾಗೂ ಕಾಲಾನುಕ್ರಮಗೊಳ್ಳದೇ ಇದ್ದಲ್ಲಿ ಸಿಬ್ಬಂದಿಗಳ ಭವಿಷ್ಯದ ಸಮಸ್ಯೆಗಳ ಕುರಿತಾಗಿ ಚರ್ಚಿಸಲಾಯಿತು. ನಂತರ ಸಿಂಡಿಕೇಟ್ ಸಭೆಯೇ ಇದಕ್ಕೆ ಪರಿಹಾರವನ್ನು ತಿಳಿಸಬೇಕೆಂದು ವಿಶ್ವವಿದ್ಯಾಲಯದ ಅಧಿಕಾರಿಗಳು ಕೇಳಿದರು. ಅದಕ್ಕೆ ಸಿಂಡಿಕೇಟ್ ಸದಸ್ಯರು ಸದರಿ ಸಿಬ್ಬಂದಿಗಳ ಸೇವಾ ಪುಸ್ತಕಗಳನ್ನು ದೃಢೀಕರಣ ಹಾಗೂ ಕ್ರಮಬದ್ಧಗೊಳಿಸಲು ಪ್ರಸ್ತುತ ಕುಲಸಚಿವರಾಗಿರುವ ನೀವೇ ಅಗತ್ಯಕ್ರಮ ಕೈಗೊಳ್ಳಬಹುದಲ್ಲವೇ ಎಂದು ಕುಲಸಚಿವರನ್ನು ಕೇಳಿದರು.<br>ಸದರಿ ಬೋಧಕೇತರ ಸಿಬ್ಬಂದಿಗಳ ಸೇವಾ ಪುಸ್ತಕಗಳನ್ನು ದೃಢೀಕರಣ ಹಾಗೂ ಕ್ರಮಗೊಳಿಸಲು ಅಗತ್ಯ ಕ್ರಮ ಕೈಗೊಂಡಲ್ಲಿ ಅಥವಾ ಅಗತ್ಯ ಅದೇಶಗಳನ್ನು ನೀಡಿದ್ದಲ್ಲಿ, ಭವಿಷ್ಯದಲ್ಲಿ ಸದರಿ ವಿಷಯದ ಕುರಿತಾಗಿ ಸರ್ಕಾರದಿಂದಾಗಲೀ ಅಥವಾ ಘನತೆವೆತ್ತ ರಾಜ್ಯಪಾಲರ ಭವನದಿಂದಾಗಲೀ ವ್ಯತಿರಿಕ್ತ ಆದೇಶಗಳೇನಾದರೂ ಬಂದಲ್ಲಿ ಅದಕ್ಕೆ ಕುಲಸಚಿವರನ್ನು ಹೊಣೆ ಮಾಡದೇ ಸಂಪೂರ್ಣವಾಗಿ ಸಿಂಡಿಕೇಟ್ ಸಭೆಯು ಜವಾಬ್ದಾರಿಯನ್ನು ಹೊತ್ತುಕೊಳ್ಳುವುದಾದಲ್ಲಿ ಸದರಿ ಸಿಬ್ಬಂದಿಗಳ ಭವಿಷ್ಯದ ಹಿತದೃಷ್ಠಿಯಿಂದ ನಾನು ಅವರ ಸೇವಾ ಪುಸ್ತಕಗಳ ದೃಢೀಕರಣ ಹಾಗೂ ಕಾಲಾನುಕ್ರಮಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲು ಹಾಗೂ ಅಗತ್ಯ ಅದೇಶಗಳನ್ನು ನೀಡಲು ಸಿದ್ಧನಿರುವುದಾಗಿ ಕುಲಸಚಿವರು ಸಭೆಗೆ ತಿಳಿಸಿದರು.<br>ಸದರಿ ಬೋಧಕೇತರ ಸಿಬ್ಬಂದಿಗಳ ಸೇವಾ ಪುಸ್ತಕಗಳನ್ನು ದೃಢೀಕರಣ ಹಾಗೂ ಕಾಲಾನುಕ್ರಮಗೊಳಿಸಲು ಅಗತ್ಯ ಕ್ರಮ ಕೈಗೊಂಡಲ್ಲಿ ಅಥವಾ ಅಗತ್ಯ ಅದೇಶಗಳನ್ನು ನೀಡಿದ್ದಲ್ಲಿ, ಭವಿಷ್ಯದಲ್ಲಿ ಸದರಿ ವಿಷಯದ ಕುರಿತಾಗಿ ಸರ್ಕಾರದಿಂದಾಗಲೀ ಅಥವಾ ಘನತೆವೆತ್ತ ರಾಜ್ಯಪಾಲರ ಭವನದಿಂದಾಗಲೀ ವ್ಯತಿರಿಕ್ತ ಆದೇಶಗಳೇನಾದರೂ ಬಂದಲ್ಲಿ ಅದಕ್ಕೆ ಸಂಪೂರ್ಣವಾಗಿ ಸಿಂಡಿಕೇಟ್ ಸಭೆಯು ಜವಾಬ್ದಾರಿಯನ್ನು ಹೊತ್ತುಕೊಳ್ಳಲು ಸಿದ್ಧವಿದ್ದು, ಕುಲಸಚಿವರು ಈ ನಿಟ್ಟಿನಲ್ಲಿ ನಿರ್ಭೀತಿಯಿಂದ ಮುಂದುವರೆಯುವಂತೆ ಸಭೆಯು ಸೂಚಿಸಿತು. |
| V | 2019/06/V | ಡಾ. ಕೆ. ಬಿ, ಚಂದ್ರಿಕಾ, ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಇವರು ಕೆನಡಾದಲ್ಲಿ ನಡೆದ ಸಮಾಜಶಾಸ್ತ್ರ ಸಮ್ಮೇಳನದಲ್ಲಿ ಭಾಗವಹಿಸಿದ್ದಕ್ಕೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ Financial Assistance ಕೋರಿರುವ ಕುರಿತು. |
| | ತೀರ್ಮಾನ | ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯದ ನಿಯಮಗಳನ್ನು ಪಾಲಿಸುತ್ತಾ ಹಣಕಾಸು ಅಧಿಕಾರಿಗಳ ಸಲಹೆಯಂತೆ ಮುಂದುವರೆಯಲು ಸಭೆಯು ಸೂಚಿಸಿತು. |
| VI | 2019/06/VI | ಡಾ. ಪೂರ್ಣಿಮಾ ಪಟ್ಟಣಶೆಟ್ಟಿ ಇವರನ್ನು ಡೀನರನ್ನಾಗಿ ಮಾಡಿದ್ದ ಆದೇಶಕ್ಕೆ ಸಂಬಂಧಿಸಿ ಇತರೆ ವಿಭಾಗದ ಡೀನರು ಸಲ್ಲಿಸಿರುವ ಆಕ್ಷೇಪಣೆಯ ಕುರಿತು. |
| | ತೀರ್ಮಾನ | ಸ್ಕೂಲ್ ಆಫ್ ಎಜ್ಯುಕೇಷನ್‌ಗೆ ಡಾ. ಪೂರ್ಣಿಮಾ ಪಟ್ಟಣಶೆಟ್ಟಿ, ಸಹ ಪ್ರಾಧ್ಯಾಪಕರು, ಸ್ನಾತಕೋತ್ತರ ಶಿಕ್ಷಣ ವಿಭಾಗ, ರಾ.ಚ.ವಿ. ಬೆಳಗಾವಿ ಇವರನ್ನು ನಿರ್ದೇಶಕರನ್ನಾಗಿ ಮಾಡಿದ್ದ ನೇಮಕವನ್ನು ಆಕ್ಷೇಪಿಸಿ, ಇತರೆ ಡೀನರು ಸಲ್ಲಿಸಿದ್ದ ಪತ್ರಗಳನ್ನು ಸಿಂಡಿಕೇಟ್ ಸಭೆಯ ಅವಗಹನೆಗಾಗಿ ತರಲಾಯಿತು. ಸದರಿ ಪತ್ರಗಳನ್ನು ಪರಿಶೀಲಿಸಿದ ಸಿಂಡಿಕೇಟ್ ಸಭೆಯು ಡಾ. |

| | | |
|---|---|---|
| | | ಪೂರ್ಣಿಮಾ ಪಟ್ಟಣಶೆಟ್ಟಿ ಇವರಿಗೆ ನೀಡಲಾಗಿರುವ ಆದೇಶವನ್ನು ಹಾಜರುಪಡಿಸುವಂತೆ ತಿಳಿಸಿದಾಗ, ಸದರಿ ಆದೇಶ ಪತ್ರವನ್ನು ಸಿಂಡಿಕೇಟ್ ಸಭೆಯಲ್ಲಿ ಹಾಜರುಪಡಿಸಲಾಯಿತು.<br>ನಂತರ ಸಿಂಡಿಕೇಟ್ ಸಭೆಯು ಸದರಿ ಆದೇಶ ಪತ್ರವನ್ನು ಹಾಗೂ ವಿಶ್ವವಿದ್ಯಾಲಯದ ನಿಯಮಾವಳಿಗಳನ್ನು ಅವಲೋಕಿಸಿ, ಡಾ. ಪೂರ್ಣಿಮಾ ಪಟ್ಟಣಶೆಟ್ಟಿ ಇವರಿಗೆ ನೀಡಲಾಗಿರುವ ಕಛೇರಿ ಆದೇಶ ಪತ್ರ ಸಂಖ್ಯೆ: ರಾಚವಿ/ಬೆಳಗಾವಿ/ಕುಸಕಾ/2019-20/177. ದಿ:16-04-2019ರ ವಿಶ್ವವಿದ್ಯಾಲಯದ ನಿಯಮಾವಳಿಗಳಂತೆ ನಿರ್ದೇಶಕರ ಹುದ್ದೆಗೆ ಕಾಲಮಿತಿ ನಿಗದಿಪಡಿಸಿ ಪರಿಷ್ಕೃತ ಆದೇಶ ಹೊರಡಿಸುವಂತೆ ಸಭೆಯು ಸೂಚಿಸಿತು. |

ಕೊನೆಯಲ್ಲಿ ಮಾನ್ಯ ಕುಲಪತಿಗಳು ವಾಸಿಸುತ್ತಿರುವ ಮನೆಯ ಬಾಡಿಗೆಯನ್ನು ಕರ್ನಾಟಕ ಸರಕಾರ ಲೋಕೋಪಯೋಗಿ ಇಲಾಖೆ ಇವರು ನಿರ್ದೇಶಿಸಿದಂತೆ, ಪೂರ್ವಾನ್ವಯವಾಗಿ ಅಳವಡಿಸಿಕೊಂಡು ಪಾವತಿಸಿದ ಬಾಡಿಗೆಗೆ ಸಭೆಯು ಅನುಸಮರ್ಥನೆ ನೀಡಿತು ಹಾಗೂ ಬಾಡಿಗೆ ಪತ್ರದ ಕರಾರಿನಂತೆ ಮುಂಬರುವ ದಿನಗಳಲ್ಲಿ ಬಾಡಿಗೆಯನ್ನು ಪಾವತಿಸಲು ಸಭೆಯು ಅನುಮೋದನೆ ನೀಡಿತು.

**KIONICS** ಸಂಸ್ಥೆಯು ಕರ್ನಾಟಕ ಸರಕಾರದ ಅಂಗ ಸಂಸ್ಥೆಯಾಗಿದ್ದು, ವಿಶ್ವವಿದ್ಯಾಲಯವು ಈ ಸಂಸ್ಥೆಯಿಂದ ನೇರವಾಗಿ ಸರಕು ಹಾಗೂ ಸೇವೆಯನ್ನು ಪಡೆಯಲು ಸಭೆಯು ಅನುಮೋದನೆ ನೀಡಿತು.

ಸಿಂಡಿಕೇಟ್ ಸದಸ್ಯರಾದ ಶ್ರೀ ನರಸಿಂಹ ರಾಯಚೂರ ಇವರು ಸಿಂಡಿಕೇಟ್ ಸದಸ್ಯರುಗಳಿಗೆ ಪ್ರಯಾಣ ಭತ್ಯೆ ಹಾಗೂ ದಿನ ಭತ್ಯೆಯನ್ನು ಹೆಚ್ಚುಸುವ ಪ್ರಸ್ತಾವನೆಯನ್ನು ಸಭೆಯ ಮುಂದೆ ಮಂಡಿಸಿದರು. ಸಭೆಯು ಬೇರೆ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರುಗಳಿಗೆ ನೀಡಲಾಗುತ್ತಿರುವ ಪ್ರಯಾಣ ಭತ್ಯೆ ಹಾಗೂ ದಿನ ಭತ್ಯೆಯ ವಿವರವಾದ ಮಾಹಿತಿಯನ್ನು ಪಡೆದು ಕ್ರಮವಹಿಸುವಂತೆ ಸಭೆಯು ಸೂಚಿಸಿತು.

ಕೊನೆಯದಾಗಿ ಕುಲಸಚಿವರು(ಮೌ) ಇವರು ಎಲ್ಲ ಸದಸ್ಯರುಗಳಿಗೆ ವಂದನೆಯನ್ನು ಸಲ್ಲಿಸುವುದರ ಮೂಲಕ ಸಭೆಯು ಸಂಪನ್ನಗೊಂಡಿತು.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗೂ ಅಧ್ಯಕ್ಷರು

ಇವರಿಗೆ,

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಗೌರವಾನ್ವಿತ ಸಿಂಡಿಕೇಟ್ ಸದಸ್ಯರುಗಳಿಗೆ,

ಪ್ರತಿ ಮಾಹಿತಿಗಾಗಿ :

ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.